ಸಣ್ಣ ಮತ್ತು ಮಧ್ಯಮ ನಗರ ಸಭೆಗಳ ಅಭಿವೃದ್ಧಿ ಯೋಜನೆಯ ಹಣವನ್ನು ಠೇವಣಿ ಇರಿಸಿರುವ ಬಗ್ಗೆ

836 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಣ್ಣ ಮತ್ತು ಮಧ್ಯಮ ನಗರಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ (ಐ.ಡಿ.ಎಸ್.ಎಂ.ಟಿ) ಮಂಜೂರಾದ ಹಣವನ್ನು ಪೌರಾಡಳಿತ ನಿರ್ದೇಶನಾಲಯ ಸಹಕಾರಿ ಬ್ಯಾಂಕಿನಲ್ಲಿ ಠೇವಣಿ ಮಾಡಿರುವುದು ನಿಜವೇ?*

ಆ) *ಈ ಸಹಕಾರಿ ಬ್ಯಾಂಕ್ ದಿವಾಳಿಯಾಗಿ ಯೋಜನೆಯ ಠೇವಣಿ ಹಣ ನಷ್ಟವಾಗಿರುವುದು ನಿಜವೇ?*

ಇ) *ಹಾಗಿದ್ದಲ್ಲಿ ಈ ಮೊಬಲಗೂ ಎಷ್ಟು? ಹಾಗಿದ್ದಲ್ಲಿ ಠೇವಣಿ ಇಟ್ಟವರ ಮೇಲೆ ಸರ್ಕಾರವು ತೆಗೆದಕೊಳ್ಳುವುದು?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ರೂ. 65401250.00 ಈ ಪ್ರಕರಣವನ್ನು ತನಿಖೆಗಾಗಿ ದಿ: 4-3-1997ರ ಸರ್ಕಾರಿ ಆದೇ ಸಂಖ್ಯೆ:ನಆಇ 6 ಡಿಎಂಕೆ 96ರಲ್ಲಿ ಲೋಕಾಯುಕ್ತಕ್ಕೆ ವಹಿಸಲಾಗಿದೆ.

ಕಡಿಮೆ ವೆಚ್ಚದ ಶೌಚಾಲಯ ನಿರ್ಮಾಣ

838 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಡಿಮೆ ವೆಚ್ಚದ ಶೌಚಾಲಯ ನಿರ್ಮಾಣ ಯೋಜನೆಯಡಿಯಲ್ಲಿ ಉಡುಪಿ ನಗರ ಸಭೆ ಪ್ರದೇಶಕ್ಕೆ ಮಂಜೂರಾದ ಶೌಚಾಲಯಗಳ ಸಂಖ್ಯೆ ಎಷ್ಟು?*

ಆ) *ಈಗಾಗಲೇ ನಿರ್ಮಾಣವಾಗಿರುವ ಶೌಚಾಲಯಗಳು ಎಷ್ಟು? ಬಾಕಿ ಉಳಿದಿರುವುದು ಎಷ್ಟು?*

ಇ) *ಈ ಯೋಜನೆಯ ಹಣ ಮರುಪಯೋಗವಾಗಿರುವುದು ನಿಜವೇ? ನಿಜವಾದಲ್ಲಿ ಅದರ ಮೊತ್ತ ಎಷ್ಟು?*

ಈ) *ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) 252

ಆ) ಈಗಾಗಲೇ ನಿರ್ಮಾಣವಾಗಿರುವ ಶೌಚಾಲಯಗಳ ಸಂಖ್ಯೆ 136 ಬಾಕಿ ಉಳಿದಿರುವ ಸಂಖ್ಯೆ :116

ಇ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಸರ್ಕಾರದ ಒಡೆತನದಲ್ಲಿರುವ ಗಣಿಗಳು

840 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಒಡೆತನದಲ್ಲಿರುವ ಗಣಿಗಳು ಯಾವುವು, ಹಾಗೂ ಇವು ಯಾವ ಯಾವ ಪ್ರದೇಶಗಳಲ್ಲಿ ಇವೆ?

ಆ) ಈ ಗಣಿಗಳಿಂದ ಸರ್ಕಾರಕ್ಕೆ ಬರುವ ರಾಜಧನ ಎಷ್ಟು? (ವಿವರ ನೀಡುವುದು)

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಹಳೆಯ ಮೈಸೂರು ಪ್ರಾಂತ್ಯದಲ್ಲಿನ ಹಾಗೂ ಹಾಲಿ ಕರ್ನಾಟಕ ರಾಜ್ಯದ ಭಾಗವಾಗಿರುವ ಕೆಲವು ಪ್ರದೇಶಗಳಲ್ಲಿನ ಜನರು ಹೊಂದಿರುವ ಪಟ್ಟಾ ಜಮೀನುಗಳಲ್ಲಿರುವ ಜನರು ಹೊಂದಿರುವ ಉಪ ಖನಿಜಗಳನ್ನು ಹೊರತುಪಡಿಸಿ ಎಲ್ಲಾ ಖನಿಜ ಸಂಪತ್ತು ಸರ್ಕಾರಕ್ಕೆ ಸೇರಿರುತ್ತದೆ. ಅದಾಗ್ಯೂ ಮುಖ್ಯ ಖನಿಜಗಳು ಹಾಗೂ ಉಪ ಖನಿಜಗಳಿಗೆ ಸಂಬಂಧಿಸಿದಂತೆ ಗಣಿ ಗುತ್ತಿಗೆಗಳನ್ನು ಗಣಿಗಳು ಮತ್ತು ಖನಿಜಗಳು (ವಿನಿಯಮನ ಮತ್ತು ಅಭಿವೃದ್ಧಿ) ಅಧಿನಿಯಮ 1957, ಖನಿಜ ರಿಯಾಯಿತಿ ನಿಯಮಗಳು 1960 ಮತ್ತು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994ರ ಅಡಿಯಲ್ಲಿ ನೀಡಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ 545 ಮುಖ್ಯ ಖನಿಜಗಳ ಗಣಿ ಗುತ್ತಿಗೆಗಳು ಹಾಗೂ 7181 ಉಪಖನಿಜಗಳ (ಗ್ರಾನೈಟ್ ಸೇರಿದಂತೆ) ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ.

ಆ)

	1995-96 (ರೂ. ಕೋಟಿಗಳಲ್ಲಿ)
1. ಮುಖ್ಯ ಖನಿಜಗಳ ಗಣಿ ಗುತ್ತಿಗೆಗಳಿಂದ	62.17
2. ಕಲ್ಲು ಗಣಿ ಗುತ್ತಿಗೆಗಳಿಂದ	42.00
ಒಟ್ಟು	**104.17**